ಗಾಂಧೀ ಜಯಂತಿ

೧೯೪೭

ಮಾ ಕ್ಲೈಬ್ಯಂ

ರತ್ನ ಶಿಶು ಸಾಹಿತ್ಯ

ಹುಡುಗರಿಗಾಗಿ



ಹೂ ನಾಲ್ಕು

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರಂ

ಆಣೆ ಮೂರು

ಓಂ

[ಹಿಂದೆ ಪಾಂಡವರಿಗೂ ಕೌರವರಿಗೂ ಯುದ್ಧ ನಡೆಯಿತು. ಯುದ್ಧ ಭೂಮಿಯಲ್ಲಿ ಪಾಂಡವನಾದ ಅರ್ಜುನನು ಕೌರವರನ್ನು ಕೊಲ್ಲಲು ಹಿಂತೆಗೆದು ನಿಂತಾಗ, ಶ್ರೀ ಕೃಷ್ಣನು ಅವನಿಗೆ **'ಮಾ ಕ್ಲೈಬ್ಯಂ'** ಎಂದರೆ 'ಹೇಡಿತನ ಬೇಡ' ಎಂದು ಬೋಧೆ ಮಾಡಿದ. ಈ ಬೋಧೆ ಯನ್ನು ತಿಳಿಸುವ ಪುಸ್ತಕವೇ **'ಶ್ರೀಮತ್ ಭಗವದ್ಗೀತೆ.'** ಗಾಂಧೀಜೀ ಇದನ್ನು ದಿನವೂ ಪಾರಾಯಣ ಮಾಡುತ್ತಾರೆ, ದಿನವೂ ಇದರಂತೆ ನಡೆಯುತ್ತಾರೆ. ಭಗವದ್ಗೀತೆ ಗಾಂಧೀಜಿಗೆ ಮೇಲ್ಪಂಕ್ತಿಯಾಗಿದೆ. ಗಾಂಧೀಜೀ ನಮಗೆ ಮೇಲ್ಪಂಕ್ತಿಯಾಗಲಿ.]

ಮಾ ಕ್ಲೈಬ್ಯಂ

ಓಂ

ಭಗವಂತನಾದ ನಾರಾಯಣನಿಂದಲೇ ಪಾರ್ಥನಿಗೆ ಪ್ರತಿಬೋಧಿತ ವಾದ, ಪುರಾಣಮುನಿಯಾದ ವ್ಯಾಸನಿಂದ ಮಹಾಭಾರತದ ಮಧ್ಯದಲ್ಲಿ ಬರೆಯಲ್ಪಟ್ಟ, ಅದ್ವೈತವೆಂಬ ಅಮೃತದ ಮಳೆ ಸುರಿಸುವ, ಭಗವತಿ ಯಾದ, ಹದಿನೆಂಟು ಅಧ್ಯಾಯಗಳುಳ್ಳ, ಭವವನ್ನು ನಾಶಮಾಡುವ ಓ ಭಗವದ್ಗೀತೆ! ತಾಯಿ! ನಿನ್ನನ್ನು ನಾನು ಅನುಸಂಧಾನ ಮಾಡು ತ್ತೇನೆ.

ಭಾರತವೆಂಬ ತೈಲದಿಂದ ತುಂಬಿದ ಜ್ಞಾನಮಯವಾದ ಪ್ರದೀಪವು ನಿನ್ನಿಂದ ಪ್ರಜ್ವಲಿಸಲ್ಪಟ್ಟಿತು, ಹೇ ವಿಶಾಲಬುದ್ಧಿಯಾದ, ಅರಳಿದ ಅರವಿಂದದ ಅಗಲವಾದ ದಳದಂತೆ ಕಣ್ಣುಳ್ಳ ವ್ಯಾಸ! ನಿನಗೆ ನಮಸ್ಕಾರ.

ಎಲ್ಲಾ ಉಪನಿಷತ್ತುಗಳೂ ಗೋವುಗಳು. ಗೋವುಗಳನ್ನು ಕಾಯು ವವನ ಮಗನಾದ ಶ್ರೀಕೃಷ್ಣನೇ ಹಾಲು ಕರೆಯುವವನು. ಪಾರ್ಥ ಕರು. ಕುಡಿಯುವವರು ಜ್ಞಾನಿಗಳು. ಗೀತೆಯ ಮಹತ್ತಾದ ಅಮೃತವೇ ಹಾಲು.

ಪ್ರಪನ್ನರಿಗೆ ಪಾರಿಜಾತದಂತಿರುವ, ಗೋವುಗಳನ್ನು ಅಟ್ಟುವ ಕೋಲನ್ನು ಕೈಯಲ್ಲಿ ಉಳ್ಳ, ಗೀತೆಯೆಂಬ ಅಮೃತವನ್ನು ಹಾಲುಕರೆದ, ಜ್ಞಾನಮುದ್ರೆಯ ಕೃಷ್ಣನಿಗೆ ನಮಸ್ಕಾರ.

ಓಂ

ಮಹಾತ್ಮಾ ಗಾಂಧೀಜೀ
ಅವರ
ಎಪ್ಪತ್ತನಾಲ್ಕನೆಯ ಹುಟ್ಟಿದ ಹಬ್ಬದ ದಿವಸ
ನಮ್ಮ ನಾಡಿನ ಪುಟ್ಟ ಪುಟಾಣಿ ಮಕ್ಕಳಿಗೆ
ಕೊಟ್ಟುದು

೨-೧೦-೧೯೪೨

ಮಾ ಕ್ಲೈಬ್ಯಂ

ಓಂ

ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ
ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಂ
ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾಧ್ಯಾಯಿನೀಂ
ಅಂಬ ತ್ವಾಮನುಸಂದಧಾಮಿ ಭಗವದ್ಗೀತೇ ಭವದ್ವೇಷಿಣೀಮ್

ನಮೋಸ್ತು ತೇ ವ್ಯಾಸ ವಿಶಾಲಬುದ್ಧೇ
ಫುಲ್ಲಾರವಿಂದಾಯತಪತ್ರನೇತ್ರ
ಯೇನ ತ್ವಯಾ ಭಾರತತೈಲಪೂರ್ಣ
ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್

ಪ್ರಪನ್ನಪಾರಿಜಾತಾಯ ತೋತ್ರವೇತ್ರೈಕಪಾಣಯೇ
ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ

ಸಂಜಯನು ಹೇಳಿದನು

೧. ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ದೊಡ್ಡ ರಥದಲ್ಲಿ ಕುಳಿತು ಮಾಧವನಾದ ಕೃಷ್ಣನೂ ಪಾಂಡವನಾದ ಅರ್ಜುನನೂ ದಿವ್ಯವಾದ ಶಂಖಗಳನ್ನು ಊದಿದರು.

೨. ಆ ಒಟ್ಟಾಗಿ ಸೇರಿದ ಘೋಷ ಭೂಮಿ ಆಕಾಶಗಳಲ್ಲಿ ಮೊಳಗಿ ಧೃತರಾಷ್ಟ್ರನ ಕಡೆಯವರ ಹೃದಯಗಳನ್ನು ಸೀಳಿತು.

೩. ದೊರೆಯೆ, ಆಗ ಕಪಿಧ್ವಜನಾದ ಅರ್ಜುನನು ವ್ಯವಸ್ಥೆಯಿಂದಿದ್ದ ಧೃತರಾಷ್ಟ್ರನ ಕಡೆಯವರನ್ನು ಕಂಡು, ಹೃಷೀಕೇಶನಿಗೆ ಈ ಮಾತು ಹೇಳಿದನು:

ಅರ್ಜುನ ಹೇಳಿದನು

೪. ಅಚ್ಯುತ, ಎರಡೂ ಸೇನೆಗಳ ನಡುವೆ ನನ್ನ ರಥವನ್ನು ನಿಲ್ಲಿಸು. ಯುದ್ಧ ಮಾಡಬೇಕೆಂದು ಬಂದು ನಿಂತಿರುವ ಇವರೆಲ್ಲರನ್ನೂ ನೋಡುತ್ತೇನೆ.

ಸಂಜಯ ಹೇಳಿದನು

೫, ೬. ಗುಡಾಕೇಶನಾದ ಭಾರತನು ಹೃಷೀಕೇಶನಿಗೆ ಹೀಗೆ ಹೇಳಲು, ಆ ಉತ್ತಮವಾದ ತೇರನ್ನು ಎರಡೂ ಸೇನೆಗಳ ಮಧ್ಯೆ ತಂದು ನಿಲ್ಲಿಸಿ, ಭೀಷ್ಮ ದ್ರೋಣ ಮೊದಲಾದ ಎಲ್ಲಾ ರಾಜರ ಮುಂದೆ "ಪಾರ್ಥ, ಇಲ್ಲಿ ಸೇರಿರುವ ಕೌರವರನ್ನೆಲ್ಲ ನೋಡು" ಎಂದನು.

೭—೯. ಅಲ್ಲಿ ಎರಡು ಸೇನೆಗಳಲ್ಲಿಯೂ ನಿಂತಿದ್ದ ಪಿತೃಗಳು, ಪಿತಾಮಹರು, ಆಚಾರ್ಯರು, ಸೋದರಮಾವಂದಿರು, ಭ್ರಾತೃಗಳು, ಪುತ್ರರು, ಪೌತ್ರರು, ಗೆಳೆಯರು, ಮಾವಂದಿರು, ಸ್ನೇಹಿತರುಗಳನ್ನು ಪಾರ್ಥ ನೋಡಿದನು. ಅಲ್ಲಿ ನಿಂತಿದ್ದ ಆ ಎಲ್ಲಾ ಬಂಧುಗಳನ್ನೂ ಕಂಡು, ಕನಿಕರ ಕವಿದುಕೊಳ್ಳಲು ವಿಷಾದದಿಂದ ಹೀಗೆಂದನು:

ಸಂಜಯ ಉವಾಚ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಮಹತಿ ಸ್ಯಂದನೇ ಸ್ಥಿತೌ |
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ||೧||

ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ |
ನಭಶ್ಚ ಪೃಥಿವೀಂಚೈವ ತುಮುಲೋಽವ್ಯನುನಾದಯನ್ ||೨||

ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ |
ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ||೩||

ಅರ್ಜುನ ಉವಾಚ

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ |
ಯಾವದೇತಾನ್ ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ||೪||

ಸಂಜಯ ಉವಾಚ

ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ |
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ ||೫||

ಭೀಷ್ಮ ದ್ರೋಣ ಪ್ರಮುಖತಸ್ಸರ್ವೇಷಾಂ ಚ ಮಹೀಕ್ಷಿತಾಂ |
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ||೬||

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ
ಪಿತೄನಥ ಪಿತಾಮಹಾನ್ |
ಆಚಾರ್ಯಾನ್ ಮಾತುಲಾನ್ ಭ್ರಾತೄನ್
ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ||೭||

ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ |
ತಾನ್ ಸಮೀಕ್ಷ್ಯ ಸ ಕೌಂತೇಯಸ್ಸರ್ವಾನ್ ಬಂಧೂನವಸ್ಥಿತಾನ್ ||೮||
ಕೃಪಯಾ ಪರಯಾವಿಷ್ಟೋ ವಿಷೀದನ್ನಿದಮಬ್ರವೀತ್ |

ಅರ್ಜುನ ಹೇಳಿದನು

೯—೧೩. "ಕೃಷ್ಣ ! ಯುದ್ಧಕ್ಕಾಗಿ ಬಂದು ನೆರೆದಿರುವ ಈ ಸ್ವಜನವನ್ನು ಕಂಡು ನನ್ನ ಅಂಗಾಂಗಗಳು ಸಡಿಲುತ್ತವೆ. ಮುಖ ಬಾಡುತ್ತದೆ. ಮೈಯಲ್ಲಿ ನಡುಕವೂ ರೋಮಾಂಚವೂ ಆಗುತ್ತದೆ. ಗಾಂಡೀವ ಕೈಯಿಂದ ಜಾರುತ್ತದೆ. ಚರ್ಮವೆಲ್ಲ ಸುಡುತ್ತದೆ. ಸರಿಯಾಗಿ ನಿಲ್ಲಲು ಕೂಡ ಶಕ್ತಿಯಿಲ್ಲ. ನನ್ನ ಮನಸ್ಸು ಭ್ರಮಿಸುತ್ತದೆ. ಅಯ್ಯೋ ! ರಾಜ್ಯ ಸುಖದ ಲೋಭದಿಂದ ಸ್ವಜನರನ್ನು ಕೊಲ್ಲಲು ಉದ್ಯೋಗಿಸಿರುವ ನಾವು ಮಹತ್ತಾದ ಪಾಪ ಮಾಡಲು ನಿಶ್ಚಯಿಸಿದ್ದೇವೆ! ಇದಕ್ಕಿಂತ, ಪ್ರತೀಕಾರ ಮಾಡದ ನನ್ನನ್ನು, ಶಸ್ತ್ರವಿಲ್ಲದ ನನ್ನನ್ನು ಶಸ್ತ್ರ ಹಿಡಿದ ಕೌರವರು ರಣದಲ್ಲಿ ಕೊಂದರೆ, ನನಗೆ ಹೆಚ್ಚು ಕ್ಷೇಮವಾಗುವುದು".

ಸಂಜಯ ಹೇಳಿದನು

೧೪. ಅರ್ಜುನನು ಹೀಗೆ ಹೇಳಿ, ಬಾಣ ಬಿಲ್ಲುಗಳನ್ನು ತೊರೆದು, ಶೋಕದಿಂದ ಮನಸ್ಸು ಕದಡಿ, ಯುದ್ಧದ ನಡುವೆ ರಥದಲ್ಲಿ ಕುಳಿತು ಬಿಟ್ಟನು.

೧೫. ಹೀಗೆ ಕನಿಕರದಿಂದ ನೀರು ತುಂಬಿ ವ್ಯಾಕುಲವಾದ ಕಣ್ಣುಗಳಿಂದ ವಿಷಾದಿಸುವವನಿಗೆ ಮಧುಸೂದನನು ಈ ಮಾತು ಹೇಳಿದನು :

ಶ್ರೀ ಭಗವಂತನು ಹೇಳಿದನು

೧೬–೧೭. ಅರ್ಜುನ! ಈ ವಿಷಮವಾದ ಹೊತ್ತಿನಲ್ಲಿ ಈ ಕಶ್ಮಲ ನಿನಗೆಲ್ಲಿಂದ ಬಂತು ? ಇದು ಆರ್ಯನಿಗೆ ಯುಕ್ತವಲ್ಲ, ಇದರಿಂದ ಸ್ವರ್ಗ ಬಾರದು, ಇದರಿಂದ ಅಕೀರ್ತಿ ಬರುವುದು. ಪಾರ್ಥ ! ಕ್ಲೈಬ್ಯಕ್ಕೆ ಒಳಗಾಗಬೇಡ. ಇದು ನಿನಗೆ ಯೋಗ್ಯವಲ್ಲ. ಕ್ಷುದ್ರವಾದ ಹೃದಯ ದೌರ್ಬಲ್ಯವನ್ನು ತೊರೆದು, ಎದ್ದೇಳು, ಪರಂತಪ."

೧೮. ಶೋಕಿಸಬಾರದುದಕ್ಕೆ ನೀನು ಶೋಕಿಸುವೆ. ಆದರೂ ಪ್ರಜ್ಞೆ ಉಳ್ಳವರ ಮಾತನ್ನಾಡುವೆ. ಜೀವ ಹೋದವರನ್ನೂ ಜೀವ ಹೋಗದವರನ್ನೂ ಕುರಿತು ಪಂಡಿತರು ಶೋಕಿಸುವುದಿಲ್ಲ.

ಅರ್ಜುನ ಉವಾಚ

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ ॥ ೯ ॥
ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ॥ ೧೦ ॥
ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ॥ ೧೧ ॥
ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸ್ಥಿತಾ ವಯಂ ।
ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥ ೧೨ ॥
ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥ ೧೩ ॥

ಸಂಜಯ ಉವಾಚ

ಏವಮುಕ್ತ್ವಾರ್ಜುನಸ್ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥ ೧೪ ॥

ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ ।
ವಿಷೀದನ್ತಮಿದಂ ವಾಕ್ಯಮುವಾಚ ಮಧುಸೂದನಃ ॥ ೧೫ ॥

ಶ್ರೀ ಭಗವಾನುವಾಚ

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥ ೧೬ ॥
ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ ೧೭ ॥

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚನ್ತಿ ಪಂಡಿತಾಃ ॥ ೧೮ ॥

೧೯. ದೇಹಿಗೆ ಈ ದೇಹದಲ್ಲಿ ಕೌಮಾರ, ಯೌವನ, ಜರೆಗಳು ಹೇಗೋ ದೇಹಾನ್ತರಪ್ರಾಪ್ತಿಯೂ ಹಾಗೇ. ಧೀರರಾದವರು ಅಲ್ಲಿ ಮೋಹಗೊಳ್ಳುವುದಿಲ್ಲ.

೨೦. ಯಾವುದು ಈ ಎಲ್ಲದರಲ್ಲಿಯೂ ಹರಡಿರುವುದೋ ಅದು ನಾಶವಾಗತಕ್ಕದ್ದಲ್ಲವೆಂದು ಕಂಡಿತ ತಿಳಿ. ನಾಶವಿಲ್ಲದ ಅದನ್ನು ನಾಶ ಮಾಡುವ ಅರ್ಹತೆ ಯಾರಿಗೂ ಇಲ್ಲ.

೨೧. ಮಾಸಿ ಹರಿದ ಬಟ್ಟೆಗಳನ್ನು ಮನುಷ್ಯನು ಹೇಗೆ ಬಿಸುಟು ಬೇರೆ ಹೊಸವನ್ನು ಹಿಡಿಯುವನೋ ಹಾಗೆಯೇ ದೇಹಿಯು ಜೀರ್ಣವಾದ ಶರೀರವನ್ನು ಬಿಟ್ಟು ಬೇರೆ ಹೊಸದಕ್ಕೆ ಹೋಗುವನು.

೨೨. ಅದನ್ನು ಶಸ್ತ್ರಗಳು ಕತ್ತರಿಸವು. ಅದನ್ನು ಬೆಂಕಿ ಸುಡದು. ಅದನ್ನು ನೀರು ಒದ್ದೆ ಮಾಡದು, ಗಾಳಿ ಒಣಗಿಸದು.

೨೩. ಹುಟ್ಟಿದವನಿಗೆ ಸಾವು ಕಂಡಿತ. ಸತ್ತವನಿಗೆ ಜನನ ಕಂಡಿತ. ಆದ್ದರಿಂದ, ತಪ್ಪಿಸಲಾರದುದಕ್ಕಾಗಿ ಶೋಕಪಡುವುದು ಯುಕ್ತವಲ್ಲ.

೨೪. ಭಾರತ, ಎಲ್ಲ ದೇಹಗಳಲ್ಲಿರುವ ದೇಹಿಯೂ ಅವಧ್ಯವಾದುದು. ಆದ್ದರಿಂದ ನೀನು ಯಾವ ಪ್ರಾಣಿಗಾಗಿಯೂ ಶೋಕಪಡತಕ್ಕದ್ದಲ್ಲ.

೨೫. ನಿನ್ನ ಸ್ವಧರ್ಮವನ್ನಾದರೂ ನೋಡು. ನೀನು ಬೆದರತಕ್ಕದ್ದಲ್ಲ. ಏಕೆಂದರೆ ಧರ್ಮಯುದ್ಧಕ್ಕಿಂತ ಶ್ರೇಯಸ್ಕರವಾದುದು ಕ್ಷತ್ರಿಯನಿಗೆ ಬೇರೊಂದಿಲ್ಲ.

೨೬. ಹತನಾದರೆ ಸ್ವರ್ಗ ಪಡೆಯುವೆ. ಗೆದ್ದರೆ ಭೂಮಿಯನ್ನು ಅನುಭವಿಸುವೆ. ಆದ್ದರಿಂದ, ಕೌಂತೇಯ, ಯುದ್ಧಕ್ಕೆ ನಿಶ್ಚಯಮಾಡಿಕೊಂಡು ಎದ್ದೇಳು.

೨೭. ಸುಖದುಃಖಗಳನ್ನೂ ಲಾಭಾಲಾಭಗಳನ್ನೂ ಜಯಾಜಯಗಳನ್ನೂ ಸಮವೆಂದು ಮಾಡಿಕೊಂಡು, ಆಮೇಲೆ ಯುದ್ಧಕ್ಕೆ ತೊಡಗು. ಹೀಗೆ ನೀನು ಪಾಪ ಪಡೆಯಲಾರೆ.

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ |
ತಥಾ ದೇಹಾನ್ತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ || ೧೯ ||

ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಃ |
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ || ೨೦ ||

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ |
ನವಾನಿ ಗೃಹ್ಣಾತಿ ನರೋಽಪರಾಣಿ
ತಥಾ ಶರೀರಾಣಿ ವಿಹಾಯ ಜೀರ್ಣಾನ್ |
ಅನ್ಯಾನಿ ಸಂಯಾತಿ ನವಾನಿ ದೇಹೀ || || ೨೧ ||

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ |
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ || ೨೨ ||

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ |
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ || ೨೩ ||

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ |
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ || ೨೪ ||

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ |
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ||೨೫||

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ
ತಸ್ಮಾದುತ್ತಿಷ್ಠ ಕೌನ್ತೇಯ ಯುದ್ಧಾಯ ಕೃತನಿಶ್ಚಯಃ || ೨೬ ||

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ೨೭ ||

೨೮. ಇದರಲ್ಲಿ, ಮಾಡಿದ ಪ್ರಯತ್ನ ವ್ಯರ್ಥವಾಗದು. ಮಾಡಿದು ದಕ್ಕೆ ವಿರುದ್ಧವಾದ ಫಲವಾಗದು. ಈ ಧರ್ಮದಲ್ಲಿ ಸ್ವಲ್ಪ ಆದರೂ ಕೂಡ ಮಹತ್ತಾದ ಭಯದಿಂದ ಕಾಪಾಡುತ್ತದೆ.

೨೯. ಕರ್ಮದಲ್ಲಿ ಮಾತ್ರ ನಿನ್ನ ಅಧಿಕಾರ; ಫಲದಲ್ಲಿ ಎಂದೂ ಅಲ್ಲ. ಕರ್ಮಗಳ ಫಲಕ್ಕೆ ನೀನು ಹೇತುವಾಗಬೇಡ. ಅಕರ್ಮಗಳೊಡನೆ ಸಂಗಮಾಡಬೇಡ.

೩೦. ಧನಂಜಯ! ಯೋಗಸ್ಥನಾಗಿ, ಸಂಗ ತೊರೆದು, ಕರ್ಮ ಮಾಡು. ಸಿದ್ಧಿ ಅಸಿದ್ಧಿಗಳಲ್ಲಿ ಸಮನಾಗುವ ಸಮತ್ವವನ್ನೇ ಯೋಗ ವೆನ್ನುವರು.

೩೧. ಬುದ್ಧಿಯಿಂದ ಕೂಡಿದವನು ಇಲ್ಲಿ ಸುಕೃತ ದುಷ್ಕೃತ ಎರಡ ರಿಂದಲೂ ಬಿಡಿಸಿಕೊಳ್ಳುವನು. ಆದ್ದರಿಂದ ಯೋಗದಲ್ಲಿ ಸೇರಿಕೊ. ಕರ್ಮದಲ್ಲಿ ಕುಶಲನಾಗಿರುವದೇ ಯೋಗ.

ಅರ್ಜುನ ಹೇಳಿದನು

೩೨. ಕೇಶವ, ಸ್ಥಿತಪ್ರಜ್ಞನಾಗಿ ಸಮಾಧಿಯಲ್ಲಿ ನಿಂತವನ ಲಕ್ಷಣ ಗಳೇನು? ಸ್ಥಿತವಾದ ಜ್ಞಾನವುಳ್ಳವನು ಹೇಗೆ ಮಾತಾಡುವನು? ಹೇಗೆ ಇರುವನು? ಹೇಗೆ ನಡೆಯುವನು?

ಶ್ರೀ ಭಗವಂತನು ಹೇಳಿದನು

೩೩. ಪಾರ್ಥ! ಯಾವಾಗ ಮನೋಗತಗಳಾದ ಸರ್ವಕಾಮ ಗಳನ್ನೂ ತೊರೆಯುವನೋ, ಆತ್ಮದಲ್ಲಿ ಆತ್ಮನಿಂದ ಯಾವಾಗ ತೃಪ್ತಿ ಪಡೆಯುವನೋ ಆಗ ಅವನನ್ನು ಸ್ಥಿತ ಪ್ರಜ್ಞನೆಂದು ಹೇಳುವರು.

೩೪. ದುಃಖದಲ್ಲಿ ಮನಸ್ಸು ಕದಡದೆ, ಸುಖದಲ್ಲಿ ಆಸೆಪಡದೆ, ರಾಗ ಭಯ ಕ್ರೋಧಗಳು ಕಳೆದುಕೊಂಡವನನ್ನು ಸ್ಥಿತಧೀಯಾದ ಮುನಿ ಯೆನ್ನುವರು.

೩೫. ಯಾರು ಸರ್ವತ್ರ ಅಂಟಿಕೊಳ್ಳದೆ, ಪ್ರಾಪ್ತವಾದ ಆ ಆ ಶುಭಾ ಶುಭಗಳಿಗೆ ಆನಂದಿಸದೆಯೂ ದ್ವೇಷಿಸದೆಯೂ ಇರುವನೋ ಅವನ ಪ್ರಜ್ಞೆ ಪ್ರತಿಷ್ಠಿತವಾದುದು.

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ |
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ || ೨೮ ||

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ |
ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ ||೨೯||

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ |
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ || ೩೦ ||

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ |
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಂ || ೩೧ ||

ಅರ್ಜುನ ಉವಾಚ

ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ |
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್ || ೩೨ ||

ಶ್ರೀ ಭಗವಾನುವಾಚ

ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ |
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ || ೩೩ ||

ದುಃಖೇಷ್ವನುದ್ವಿಗ್ನಮನಾಸ್ಸುಖೇಷು ವಿಗತಸ್ಪೃಹಃ |
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ || ೩೪ ||

ಯಸ್ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಮ್ |
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ || ೩೫ ||

೩೬. ಆಮೆ ತನ್ನ ಅಂಗಗಳನ್ನು ಹೇಗೋ ಹಾಗೆ, ಅವನು ಇಂದ್ರಿಯ ವಿಷಯಗಳಿಂದ ಇಂದ್ರಿಯಗಳನ್ನು ಸಂಪೂರ್ಣವಾಗಿ ಒಳಗೆಳೆದುಕೊಂಡಾಗ, ಅವನ ಪ್ರಜ್ಞೆ ಪ್ರತಿಷ್ಠಿತವಾದುದು.

೩೭. ಆಹಾರ ಬಿಟ್ಟ ದೇಹಿಯ ವಿಷಯಗಳು ಕಳಚಿಬೀಳುವುವು, ರಸವನ್ನು ತೊರೆದು, ಪರವನ್ನು ಕಂಡು, ಅವನ ರಸ ಕೂಡ ಬಿಟ್ಟು ಹೋಗುತ್ತದೆ.

೩೮. ಕೌಂತೇಯ ! ಬಹು ತಂಟೆಮಾಡುವ ಇಂದ್ರಿಯಗಳು, ಬುದ್ಧಿವಂತನಾದ ಪುರುಷನು ಎಷ್ಟೇ ಪ್ರಯತ್ನಮಾಡಿದರೂ ಬಲವಂತ ದಿಂದ ಅವನ ಮನಸ್ಸನ್ನು ಹಾರಿಸುತ್ತವೆ.

೩೯. ಯೋಗಿಗಳು, ಅವುಗಳೆಲ್ಲವನ್ನೂ ತಡೆದಿಟ್ಟು, ನನ್ನಲ್ಲಿಯೇ ನೆಲಸಿದ್ದು, ಎಲ್ಲ ಇಂದ್ರಿಯಗಳನ್ನೂ ವಶಪಡಿಸಿಕೊಳ್ಳುವರು. ಅಂಥವನ ಪ್ರಜ್ಞೆ ಪ್ರತಿಷ್ಠಿತವಾದುದು.

೪೦. ವಿಷಯಗಳನ್ನು ಧ್ಯಾನಿಸುತ್ತ, ಪುರುಷನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಆ ಸಂಗದಿಂದ ಕಾಮ ಹುಟ್ಟುತ್ತದೆ. ಕಾಮದಿಂದ ಕ್ರೋಧ ಬೆಳೆಯುತ್ತದೆ.

೪೧. ಕ್ರೋಧದಿಂದ ಸಮ್ಮೋಹವುಂಟಾಗುತ್ತದೆ. ಸಮ್ಮೋಹ ದಿಂದ ಸ್ಮೃತಿ ವಿಭ್ರಮ. ಸ್ಮೃತಿಭ್ರಂಶದಿಂದ ಬುದ್ಧಿನಾಶ. ಬುದ್ಧಿನಾಶ ದಿಂದ ವಿನಾಶವಾಗುತ್ತಾನೆ.

೪೨. ಆದರೆ, ರಾಗದ್ವೇಷಗಳನ್ನು ಬಿಟ್ಟು ಆತ್ಮಕ್ಕೆ ವಶನಾದವನು ಇಂದ್ರಿಯಗಳಿಂದ ವಿಷಯಗಳಲ್ಲಿ ಸಂಚರಿಸುತ್ತ, ಆತ್ಮಕ್ಕೆ ವಿಧೇಯನಾಗಿ ಪ್ರಸನ್ನತೆಯನ್ನು ಹೊಂದುವನು.

೪೩. ಪ್ರಸಾದದಲ್ಲಿ ಅವನಿಗೆ ಸರ್ವದುಃಖಗಳ ಹಾನಿಯುಂಟಾಗು ವುದು. ಪ್ರಸನ್ನವಾದ ಚೇತಸ್ಸುಳ್ಳವನ ಬುದ್ಧಿ ಬೇಗನೆ ಸ್ಥಿರವಾಗಿ ನಿಲ್ಲುತ್ತದೆ.

೪೪. ಅಯುಕ್ತನಾದವನಿಗೆ ಬುದ್ಧಿಯಿಲ್ಲ, ಅಯುಕ್ತನಾದವನಿಗೆ ಭಾವನೆಯಿಲ್ಲ. ಭಾವವಿಲ್ಲದವನಿಗೆ ಶಾಂತಿಯಿಲ್ಲ. ಶಾಂತಿಯಿಲ್ಲದವನಿಗೆ ಸುಖವೆಲ್ಲಿ ?

ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ |
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ || ೩೬ ||

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ |
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ || ೩೭ ||

ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ |
ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ || ೩೮ ||

ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ |
ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ || ೩೯ ||

ಧ್ಯಾಯತೋ ವಿಷಯಾನ್ ಪುಂಸಸ್ಸಂಗಸ್ತೇಷೂಪಜಾಯತೇ |
ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ
|| ೪೦ ||

ಕ್ರೋಧಾದ್ಭವತಿ ಸಮ್ಮೋಹಸ್ಸಮೋಹಾತ್ ಸ್ಮೃತಿವಿಭ್ರಮಃ |
ಸ್ಮೃತಿ ಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ || ೪೧ ||

ರಾಗದ್ವೇಷ ವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ |
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ || || ೪೨ ||

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ |
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ || || ೪೩ ||

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ |
ನ ಚಾಭಾವಯುತಶ್ಶಾಂತಿರಶಾಂತಸ್ಯ ಕುತಸ್ಸುಖಮ್ || ೪೪ ||

೪೫. ಏಕೆಂದರೆ, ತಿರುಗಾಡುವ ಇಂದ್ರಿಯಗಳಿಗೆ ವಿಧೇಯವಾಗಿರುವ ಮನಸ್ಸು, ನೀರಮೇಲಿನ ದೋಣಿಯನ್ನು ಗಾಳಿ ಹೇಗೋ ಹಾಗೇ, ಅವನ ಪ್ರಜ್ಞೆಯನ್ನು ಹಾರಿಸಿಬಿಡುತ್ತದೆ.

೪೬. ಆದ್ದರಿಂದ ಓ ಮಹಾಬಾಹೂ, ಯಾರ ಇಂದ್ರಿಯಗಳು ಇಂದ್ರಿಯಾರ್ಥಗಳಿಂದ ಸಂಪೂರ್ಣವಾಗಿ ನಿಗೃಹೀತವಾಗಿವೆಯೋ, ಅವನ ಪ್ರಜ್ಞೆ ಪ್ರತಿಷ್ಠಿತವಾದುದು.

೪೭. ಸರ್ವಭೂತಗಳಿಗೆ ಯಾವುದು ರಾತ್ರಿಯೋ, ಅದರಲ್ಲಿ ಸಂಯಮಿಯು ಎಚ್ಚತ್ತಿರುವನು. ಭೂತಗಳು ಯಾವುದರಲ್ಲಿ ಎಚ್ಚತ್ತಿರುವವೋ, ಕಾಣುವ ಶಕ್ತಿಯುಳ್ಳ ಮುನಿಗೆ ಅದೇ ರಾತ್ರಿ.

೪೮. ಎಲ್ಲ ಕಡೆಯೂ ತುಂಬಿ ಅಲ್ಲಾಡದಂತೆ ನಿಂತ ಸಮುದ್ರದಲ್ಲಿ ನೀರು ಹೇಗೆ ಪ್ರವೇಶಿಸುವುದೋ ಹಾಗೆ ಯಾರಲ್ಲಿ ಕಾಮಗಳೆಲ್ಲವೂ ಪ್ರವೇಶಿಸುವುವೋ ಅವನು ಶಾಂತಿ ಪಡೆಯುವನು; ಕಾಮಗಳನ್ನು ಕಾಮಿಸುವವನು ಪಡೆಯುವುದಿಲ್ಲ.

೪೯. ಯಾವನು ಕಾಮಗಳನ್ನು ತೊರೆದು, ಆಸೆಗಳಿಲ್ಲದೆ, ಮಮಕಾರ ಅಹಂಕಾರಗಳಿಲ್ಲದೆ ನಡೆಯುವನೋ ಅವನು ಶಾಂತಿ ಪಡೆಯುವನು.

೫೦. ಇದು ಬ್ರಾಹ್ಮೀಸ್ಥಿತಿ, ಪಾರ್ಥ. ಇದನ್ನು ಪಡೆದರೆ ಮೋಹವಿಲ್ಲ. ಅಂತ್ಯಕಾಲದಲ್ಲೂ ಇದರಲ್ಲಿ ನೆಲಸಿದರೆ ಬ್ರಹ್ಮನಿರ್ವಾಣವನ್ನು ಪಡೆಯುವನು.

ಅರ್ಜುನ ಹೇಳಿದನು

೫೧. ಓ ಜನಾರ್ದನ! ಓ ಕೇಶವ! ಕರ್ಮಕ್ಕಿಂತ ಬುದ್ಧಿ ಮೇಲೆಂಬುದು ನಿನ್ನ ಮತವಾದರೆ, ನನ್ನನ್ನು ಏಕೆ ಘೋರವಾದ ಈ ಕರ್ಮಕ್ಕೆ ನಿಯೋಗಿಸುತ್ತೀಯೆ?

ಶ್ರೀ ಭಗವಂತನು ಹೇಳಿದನು

೫೨. ಯಾರೂ ಒಂದು ಕ್ಷಣವಾದರೂ ಕರ್ಮಮಾಡದೆ ಕುಳಿತುಕೊಳ್ಳುವುದಿಲ್ಲ. ಏಕೆಂದರೆ, ಪ್ರಕೃತಿಯಿಂದ ಹುಟ್ಟಿದ ಗುಣಗಳಿಂದ ಅವಶರಾಗಿ ಎಲ್ಲರೂ ಕೆಲಸಮಾಡುವಂತಾಗುತ್ತದೆ.

ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ |
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ || || ೪೫ ||

ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ |
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ || ೪೬ ||

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ |
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ || ೪೭ ||

ಆಪೂರ್ಯಮಾಣಮಚಲಪ್ರತಿಷ್ಠಂ |
ಸಮುದ್ರಮಾಪಃ ಪ್ರವಿಶಂತಿ ಯದ್ವತ್
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ |
ಸ ಶಾಂತಿಮಾಪ್ನೋತಿ ನ ಕಾಮಕಾಮೀ || || ೪೮ ||

ವಿಹಾಯ ಕಾಮಾನ್ ಯಸ್ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ |
ನಿರ್ಮಮೋ ನಿರಹಂಕಾರಸ್ಸ ಶಾಂತಿಮಧಿಗಚ್ಛತಿ || ೪೯ ||

ಏಷಾ ಬ್ರಾಹ್ಮೀಸ್ಥಿತಿಃ ಪಾರ್ಥ ನೈನಂ ಪ್ರಾಪ್ಯ ವಿಮುಹ್ಯತಿ |
ಸ್ಥಿತ್ವಾಽಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ || ೫೦ ||

ಅರ್ಜುನ ಉವಾಚ

ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ |
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ || ೫೧ ||

ಶ್ರೀ ಭಗವಾನುವಾಚ

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ |
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ || ೫೨ ||

೫೩. ಆದರೆ, ಅರ್ಜುನ, ಯಾರು ಇಂದ್ರಿಯಗಳನ್ನು ಮನಸ್ಸಿನಿಂದ ಅಡಗಿಸಿ, ಅಸಕ್ತರಾಗಿ, ಕರ್ಮೇಂದ್ರಿಯಗಳಿಂದ ಕರ್ಮಯೋಗದಲ್ಲಿ ತೊಡಗುವರೋ ಅವರು ಎಲ್ಲವನ್ನೂ ಮೀರಿದವರು.

೫೪. ನೀನು ನಿನಗೆ ನಿಯತವಾದ ಕರ್ಮವನ್ನು ಮಾಡು. ಏಕೆಂದರೆ, ಅಕರ್ಮಕ್ಕಿಂತ ಕರ್ಮ ಮೇಲು. ಅಕರ್ಮದಿಂದ ನಿನ್ನ ಶರೀರಯಾತ್ರೆ ಕೂಡ ಸಾಧ್ಯವಾಗುವುದಿಲ್ಲ.

೫೫. ಆದ್ದರಿಂದ ಸದಾ ಅಸಕ್ತನಾಗಿ ಕಾರ್ಯವಾದ ಕರ್ಮವನ್ನು ಆಚರಿಸು. ಅಸಕ್ತನಾಗಿ ಕರ್ಮವನ್ನು ಆಚರಿಸಿದ ಪುರುಷನು ಪರವನ್ನು ಪಡೆಯುವನು.

೫೬. ಶ್ರೇಷ್ಠರು ಯಾವಯಾವುದನ್ನು ಆಚರಿಸುವರೋ ಅದದನ್ನೇ ಇತರ ಜನರೂ ಆಚರಿಸುವರು. ಲೋಕಸಂಗ್ರಹವನ್ನಾದರೂ ಕುರಿತು ನೀನು ಕರ್ಮ ಮಾಡುವುದು ತಕ್ಕದ್ದು.

೫೭. ಓ ಭಾರತ! ಅವಿದ್ವಾಂಸರಾದವರು ಹೇಗೆ ಸಕ್ತರಾಗಿ ಕರ್ಮಗಳನ್ನು ಮಾಡುವರೋ ಹಾಗೆಯೇ ವಿದ್ವಾಂಸರಾದವರು, ಲೋಕಸಂಗ್ರಹದ ಇಷ್ಟದಿಂದ, ಅಸಕ್ತರಾಗಿ ಕರ್ಮಮಾಡಬೇಕು.

೫೮. ಅವನು ಕರ್ಮಫಲಾಸಂಗವನ್ನು ತೊರೆದು, ನಿತ್ಯತೃಪ್ತನಾಗಿ, ನಿರಾಶ್ರಯನಾಗಿ, ಕರ್ಮಗಳಲ್ಲಿ ಬಹುವಾಗಿ ಪ್ರವರ್ತಿಸುತ್ತಿದ್ದರೂ ಅವನು ಏನನ್ನೂ ಮಾಡಿದವನಾಗುವುದಿಲ್ಲ.

೫೯. ಈ ಲೋಕದಲ್ಲಿ ಜ್ಞಾನಕ್ಕೆ ಸಮನಾಗಿ ಪವಿತ್ರವಾದುದು ಯಾವುದೂ ಇಲ್ಲ. ಯೋಗದಿಂದ ಸಿದ್ಧಿ ಪಡೆದವನು ಅದನ್ನು ಕಾಲಕ್ರಮದಲ್ಲಿ ತನ್ನಲ್ಲಿ ತಾನೇ ಕಾಣುವನು.

೬೦. ಶ್ರದ್ಧೆಯುಳ್ಳವನೂ ತತ್ಪರನೂ ಇಂದ್ರಿಯಗಳನ್ನು ಸಂಯಮ ಮಾಡಿದವನೂ ಜ್ಞಾನ ಪಡೆಯುವನು. ಜ್ಞಾನವನ್ನು ಪಡೆದು, ಒಡನೆಯೆ ಉತ್ತಮವಾದ ಶಾಂತಿಯನ್ನು ಪಡೆಯುವನು.

೬೧. ಜ್ಞಾನವಿಲ್ಲದವನೂ, ಶ್ರದ್ಧೆಯಿಲ್ಲದವನೂ, ಸಂಶಯಾತ್ಮನೂ ನಾಶವಾಗುವರು. ಸಂಶಯಾತ್ಮನಿಗೆ ಈ ಲೋಕವಿಲ್ಲ, ಪರಲೋಕವಿಲ್ಲ, ಸುಖವಿಲ್ಲ.

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ |
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಸ್ಸ ವಿಶಿಷ್ಯತೇ || ೩೩ ||

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ |
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ || ೩೪ ||

ತಸ್ಮಾದಸಕ್ತಸ್ಸತತಂ ಕಾರ್ಯಂ ಕರ್ಮ ಸಮಾಚರ |
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ || ೩೫ ||

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ |
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ || ೩೬ ||

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ |
ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್ || ೩೭ ||

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ |
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ || ೩೮ ||

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ |
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ || ೩೯ ||

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಸ್ಸಂಯತೇಂದ್ರಿಯಃ |
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ || ೪೦ ||

ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ |
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ || ೪೧ ||

೬೨. ಆದ್ದರಿಂದ, ನಿನ್ನ ಅಜ್ಞಾನದಿಂದ ಹುಟ್ಟಿ ಹೃದಯದಲ್ಲಿರುವ ಈ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ, ಯೋಗವನ್ನು ಆಶ್ರಯಿಸಿ, ಎದ್ದೇಳು, ಭಾರತ!

ಅರ್ಜುನ ಹೇಳಿದನು

೬೩. ಕೃಷ್ಣ! ಕರ್ಮದ ಸಂನ್ಯಾಸವನ್ನೂ ಪುನಃ ಕರ್ಮದ ಯೋಗವನ್ನೂ ಪ್ರಶಂಸೆ ಮಾಡುತ್ತೀಯೆ. ಇವುಗಳಲ್ಲಿ ಯಾವುದೊಂದು ಶ್ರೇಯವೋ ಅದನ್ನು ನಿಶ್ಚಿತವಾಗಿ ನನಗೆ ಹೇಳು.

ಶ್ರೀ ಭಗವಂತನು ಹೇಳಿದನು

೬೪. ಕರ್ಮಸಂನ್ಯಾಸ, ಕರ್ಮಯೋಗ ಎರಡೂ ನಿಶ್ರೇಯಸವನ್ನು ಉಂಟುಮಾಡುವವು. ಅವುಗಳಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮ ಯೋಗವೇ ಮೇಲು.

೬೫. ಯಾವನು ಕರ್ಮಗಳನ್ನು ಬ್ರಹ್ಮನಲ್ಲಿ ಅರ್ಪಿಸಿ, ಸಂಗವನ್ನು ತೊರೆದು ಮಾಡುವನೋ ಅವನಿಗೆ—ತಾವರೆ ಎಲೆಗೆ ನೀರು ಹೇಗೋ ಹಾಗೆ—ಪಾಪ ಅಂಟುವುದಿಲ್ಲ.

೬೬. ಆತ್ಮನಿಂದ ಆತ್ಮನನ್ನು ಉದ್ಧಾರ ಮಾಡಬೇಕು. ಆತ್ಮನನ್ನು ಕೆಳಗೆಳೆಯುವುದು ಬೇಡ. ಆತ್ಮಕ್ಕೆ ಆತ್ಮನೇ ಬಂಧು. ಆತ್ಮಕ್ಕೆ ಆತ್ಮನೇ ಶತ್ರು.

೬೭. ಓ ಅರ್ಜುನ, ಯಾವ ಕಡೆ ಸುಖವಾಗಲಿ ದುಃಖವಾಗಲಿ, ಅದು ತನಗೇ ಆದಂತೆ ಯಾವನು ಸಮನಾಗಿ ಕಾಣುವನೋ ಅವನೇ ಪರಮ ಯೋಗಿಯೆಂದು ಎಣಿಕೆ.

೬೮-೭೦. ಅಭಯ, ಸತ್ತ್ವಸಂಶುದ್ಧಿ, ಜ್ಞಾನಯೋಗವ್ಯವಸ್ಥಿತಿ, ದಾನ, ದಮ, ಯಜ್ಞ, ವೇದಾಧ್ಯಯನ, ತಪಸ್ಸು, ಋಜುತ್ವ, ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಚಾಡಿ ಹೇಳದಿರುವುದು, ಭೂತದಯೆ, ಅಲೋಲುಪತೆ, ಮೃದುತ್ವ, ಕೆಟ್ಟ ಕೆಲಸ ಮಾಡಲು ನಾಚಿಕೆ, ಚಪಲತೆ ಯಿಲ್ಲದಿರುವಿಕೆ, ತೇಜಸ್ಸು, ಕ್ಷಮೆ, ಧೃತಿ, ಶೌಚ, ಅದ್ರೋಹ, ಅನತಿ ಮಾನ—ಇವೆಲ್ಲವೂ, ಓ ಭಾರತ, ದೈವೀಸಂಪದದಲ್ಲಿ ಹುಟ್ಟಿದ ಉತ್ತಮ ರಿಗೆ ಆಗುವವು.

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾತ್ಮನಃ |
ಛಿತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ || ೬೨ ||

ಅರ್ಜುನ ಉವಾಚ

ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ |
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ || ೬೩ ||

ಶ್ರೀ ಭಗವಾನುವಾಚ

ಸಂನ್ಯಾಸಃ ಕರ್ಮಯೋಗಶ್ಚ ನಿಶ್ರೇಯಸಕರಾವುಭೌ |
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ || ೬೪ ||

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ |
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ || ೬೫ ||

ಉದ್ಧರೇದಾತ್ಮನಾಽತ್ಮಾನಂ ನಾತ್ಮಾನಮವಸಾದಯೇತ್ |
ಆತ್ಮೈವಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ || ೬೬ ||

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ |
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ || ೬೭ ||

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ |
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ || || ೬೮ ||
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಶ್ಶಾಂತಿರಪೈಶುನಂ |
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಂ ||೬೯||
ತೇಜಃ ಕ್ಷಮಾ ಧೃತಿಶ್ಶೌಚಮದ್ರೋಹೋ ನಾತಿಮಾನಿತಾ |
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ || ೭೦ ||

೬೧. ದಂಭ, ದರ್ಪ, ಅಭಿಮಾನ, ಕ್ರೋಧ, ಕಾಠಿನ್ಯ, ಅಜ್ಞಾನ— ಇವು, ಪಾರ್ಥ, ಆಸುರೀಸಂಪದದಲ್ಲಿ ಹುಟ್ಟಿದವರ ಗುಣಗಳು.

೬೨. ದೈವೀ ಸಂಪದವು ವಿಮೋಕ್ಷಕ್ಕಾಗಿ, ಆಸುರೀಸಂಪದವು ನಿಬಂಧನಕ್ಕಾಗಿ ಎಂದು ತಿಳಿದಿದ್ದಾರೆ. ದೈವೀಸಂಪದದಲ್ಲಿ ಜನಿಸಿದವನು ನೀನು, ಪಾಂಡವ, ಶೋಕಪಡಬೇಡ.

೬೩. ದೇಹವನ್ನು ಪಡೆದವನಿಗೆ ಕರ್ಮಗಳನ್ನು ಅಶೇಷವಾಗಿ ಬಿಡಲು ಶಕ್ಯವಿಲ್ಲ. ಕರ್ಮಫಲವನ್ನು ತ್ಯಾಗಮಾಡಿದವನನ್ನೇ ತ್ಯಾಗಿ ಯೆಂದು ಕರೆಯುತ್ತಾರೆ.

೬೪. ಯಾರಿಗೆ ಅಹಂಕಾರಭಾವವಿಲ್ಲವೋ, ಯಾರ ಬುದ್ಧಿ ಅಂಟು ವುದಿಲ್ಲವೋ, ಅವನು ಈ ಲೋಕವನ್ನೆಲ್ಲ ಕೊಂದರೂ, ಕೊಂದವನಾಗುವು ದಿಲ್ಲ. ಅದು ಅವನನ್ನು ಕಟ್ಟುವುದಿಲ್ಲ.

೬೫. ಶೌರ್ಯ, ತೇಜಸ್ಸು, ಧೃತಿ, ದಕ್ಷತೆ, ಯುದ್ಧದಲ್ಲಿ ಓಡಿ ಹೋಗದಿರುವುದು, ದಾನ, ಒಡೆತನ—ಇವೆಲ್ಲ ಕ್ಷತ್ರಿಯರಿಗೆ ಸ್ವಭಾವ ದಿಂದ ಹುಟ್ಟಿದ ಕರ್ಮಗಳು.

೬೬. ನೀನು ಅಹಂಕಾರವನ್ನು ಆಶ್ರಯಿಸಿ, 'ನಾನು ಯುದ್ಧ ಮಾಡುವುದಿಲ್ಲ' ಎಂದುಕೊಂಡರೆ, ಅದು ಸುಳ್ಳಾಗುವುದು. ನಿನ್ನ ಪ್ರಕೃತಿಯೇ ನಿನ್ನನ್ನು ಅದಕ್ಕೆ ತೊಡಗಿಸುವುದು.

೬೭. ಓ ಕೌಂತೇಯ, ಮೋಹದಿಂದ ಯಾವುದನ್ನು ಮಾಡಲು ನೀನು ಇಚ್ಛಿಸುವುದಿಲ್ಲವೋ ಅದನ್ನು ನೀನೇ ನಿನ್ನ ಸ್ವಭಾವದಿಂದ ಹುಟ್ಟಿದ ಕರ್ಮಕ್ಕೆ ಕಟ್ಟುಬಿದ್ದು, ಅವಶನಾಗಿ ಮಾಡುತ್ತೀಯೆ.

೬೮. ಓ ಅರ್ಜುನ! ಈಶ್ವರನು, ಸರ್ವಭೂತಗಳನ್ನೂ ಮಾಯೆ ಯಿಂದ ಯಂತ್ರದ ಮೇಲೇರಿಸಿ ಸುತ್ತಿಸುತ್ತಾ, ಸರ್ವಭೂತಗಳ ಹೃದಯ ಸ್ಥಲದಲ್ಲಿ ಇರುವನು.

೬೯. ಓ ಭಾರತ, ಸರ್ವಭಾವದಿಂದಲೂ ಅವನಿಗೇ ಶರಣು ಹೋಗು. ಅವನ ಪ್ರಸಾದದಿಂದ ಉತ್ತಮಶಾಂತಿಯನ್ನೂ ಶಾಶ್ವತಸ್ಥಾನ ವನ್ನೂ ಪಡೆಯುವೆ.

ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ |
ಅಜ್ಞಾನಂ ಚಾಭಿಜಾತಸ್ಯ ಪಾರ್ಥಃ ಸಂಪದಮಾಸುರೀಮ್ || ೭೧ ||

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ |
ಮಾ ಶುಚಸ್ಸಂಪದಂ ದೈವೀಮಭಿಜಾತೋಽಸಿ ಪಾಂಡವ || ೭೨ ||

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ |
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೆ || ೭೩ ||

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ |
ಹತ್ವಾಽಪಿ ಸ ಇಮಾಁ ಲೋಕಾನ್ ನ ಹಂತಿ ನ ನಿಬಧ್ಯತೇ || ೭೪ ||

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯಪಲಾಯನಂ |
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಂ || ೭೫ ||

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ |
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ || ೭೬ ||

ಸ್ವಭಾವಜೇನ ಕೌಂತೇಯ ನಿಬದ್ಧಸ್ಸ್ವೇನ ಕರ್ಮಣಾ |
ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಪಿ ತತ್ || ೭೭ ||

ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ |
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ||೭೮||

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ |
ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ||೭೯||

೬೦. ಹೀಗೆ, ಗುಹ್ಯಾತ್ಗುಹ್ಯತರವಾದ ಜ್ಞಾನವನ್ನು ನಾನು ನಿನಗೆ ಹೇಳಿದ್ದೇನೆ. ಇದನ್ನು ಅಶೇಷವಾಗಿ ವಿಮರ್ಶೆಮಾಡಿ, ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು.

೬೧. ಓ ಪಾರ್ಥ! ಇದನ್ನು ನೀನು ಏಕಾಗ್ರಚಿತ್ತದಿಂದ ಕೇಳಿದೆಯ? ನಿನ್ನ ಅಜ್ಞಾನದ ಸಮ್ಮೋಹ ನಾಶವಾಯಿತೆ, ಧನಂಜಯ?

ಅರ್ಜುನ ಹೇಳಿದನು

೬೨. ಅಚ್ಯುತ, ನಿನ್ನ ಪ್ರಸಾದದಿಂದ ನನ್ನ ಮೋಹ ನಾಶವಾಯಿತು, ಸ್ಮೃತಿ ಲಭಿಸಿತು. ಸಂದೇಹ ಕಳೆದು ಸ್ಥಿರನಾದೆ. ನಿನ್ನ ಮಾತನ್ನು ನಡಸುವೆನು.

ಸಂಜಯ ಹೇಳಿದನು

೬೩. ಹೀಗೆ ಅದ್ಭುತವೂ ರೋಮಹರ್ಷಣವೂ ಆದ, ವಾಸುದೇವನ ಮತ್ತು ಮಹಾತ್ಮನಾದ ಪಾರ್ಥನ, ಸಂವಾದವನ್ನು ಕೇಳಿದೆನು.

೬೪. ಓ ರಾಜ, ಕೇಶವಾರ್ಜುನರ ಅದ್ಭುತವಾದ ಪುಣ್ಯ ಸಂವಾದವನ್ನು ಸ್ಮರಿಸಿಕೊಂಡು ಸ್ಮರಿಸಿಕೊಂಡು ಮೇಲಿಂದ ಮೇಲೆ ನಾನು ಹರ್ಷಿಸುತ್ತಿರುವೆನು.

೬೫. ಎಲ್ಲಿ ಯೋಗೇಶ್ವರನಾದ ಕೃಷ್ಣನಿರುವನೋ, ಎಲ್ಲಿ ಧನುರ್ಧರನಾದ ಪಾರ್ಥನಿರುವನೋ ಅಲ್ಲಿ ಶ್ರೀ, ವಿಜಯ, ಭೂತಿ, ನೀತಿ ಧ್ರುವವಾಗಿರುವುವೆಂದು ನನ್ನ ಬುದ್ಧಿ.

ಪರಬ್ರಹ್ಮನಾದ ಶ್ರೀ ಕೃಷ್ಣನಿಗೆ ನಮಸ್ಕಾರ

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ |
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು || ೮೦ ||

ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ |
ಕಚ್ಚಿದಜ್ಞಾನ ಸಮ್ಮೋಹಃ ಪ್ರನಷ್ಟಸ್ತೇ ಧನಂಜಯ || ೮೧ ||

ಅರ್ಜುನ ಉವಾಚ

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಽಚ್ಯುತ |
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ || || ೮೨ ||

ಸಂಜಯ ಉವಾಚ

ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ |
ಸಂವಾದಮಿಮಮಶ್ರೌಷಮದ್ಭುತಂ ರೋಮಹರ್ಷಣಂ || ೮೩ ||

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ |
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ |
|| ೮೪ ||

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ |
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾನೀತಿರ್ಮತಿರ್ಮಮ || ೮೫ ||

ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ.

ಮಕ್ಕಳ ಗಾಂಧೀ ಮಾದರಿ

ಏಕಲವ್ಯ ಒಬ್ಬ ಬೇಡರ ಹುಡುಗ. ಅವನಿಗೆ ಬಿಲ್ಲು ವಿದ್ಯೆ ಸಂಪೂರ್ಣವಾಗಿ ಕಲಿಯಲು ಆಸೆ. ಆಗಿನ ಕಾಲದಲ್ಲಿ ಬಿಲ್ಲುವಿದ್ಯೆಗೆ ದೊಡ್ಡ ಗುರು ದ್ರೋಣ. ದ್ರೋಣ ಪಾಂಡವರಿಗೂ ಕೌರವರಿಗೂ ಬಿಲ್ಲು ಕಲಿಸುತ್ತಿದ್ದ. ಏಕಲವ್ಯನಿಗೆ ಕಲಿಸಲು ಅವನಿಗೆ ವಿರಾಮವಿರಲಿಲ್ಲ. ಅದರಿಂದ ಏಕಲವ್ಯ ದ್ರೋಣನ ಒಂದು ವಿಗ್ರಹವನ್ನು ಮುಂದೆ ಇಟ್ಟುಕೊಂಡು, ಬಿಲ್ಲು ಕಲಿತ. ದ್ರೋಣನು ಎದುರಿಗಿಲ್ಲದೆ ಅವನ ವಿಗ್ರಹ ಮಾತ್ರ ಎದುರಿಗೆ ಇದ್ದರೂ, ಏಕಲವ್ಯನಿಗೆ ಗುರುಭಕ್ತಿ ತುಂಬಾ ಇತ್ತು. ಅದರಿಂದ ಅವನು ಪಾಂಡವ ಕೌರವರಿಗಿಂತ ಚೆನ್ನಾಗಿ ಬಿಲ್ಲುವಿದ್ಯೆ ಕಲಿತ.

ಮಕ್ಕಳು ಗಾಂಧೀಜೀಯಿಂದ ಕಲಿಯಬೇಕಾದ್ದು ಬಹಳವಿದೆ. ಅದರಿಂದ ಅವರು ಏಕಲವ್ಯನ ಹಾಗೆ ಆಗಬೇಕು. ಗಾಂಧೀಜೀ ಮಾಡಿದುದನ್ನೂ ಗಾಂಧೀಜೀ ಹೇಳಿದುದನ್ನೂ ಓದಿ ತಿಳಿದು, ಅದರಂತೆ ನಡೆಯಬೇಕು. **'ಗಾಂಧೀ ವಿದ್ಯೆ'** ಕಲಿಯಬೇಕು.

ಭರತ ಇನ್ನೊಬ್ಬ ಹುಡುಗ. ಇವನು ಕ್ಷತ್ರಿಯ. ಇವನ ಅಣ್ಣ ಶ್ರೀರಾಮ. ಶ್ರೀರಾಮ ಒಂದು ಸಲ ಹದಿನಾಲ್ಕು ವರ್ಷ ಕಾಡಿನಲ್ಲಿ ಇರಬೇಕಾಯಿತು. ಆಗ ಭರತ ರಾಮನ ರಾಜ್ಯದಲ್ಲಿ ರಾಜ್ಯಭಾರ ನಡಸುತ್ತಿದ್ದ. ಎಂದರೆ, ತಾನೇ ರಾಜನಾಗಲಿಲ್ಲ; ಶ್ರೀರಾಮನ ಪಾದರಕ್ಷೆಗಳನ್ನು ಪೂಜೆ ಮಾಡುತ್ತ, ಅವುಗಳೇ ಶ್ರೀರಾಮನ ಪ್ರತಿನಿಧಿಯೆಂದು ಧ್ಯಾನ ಮಾಡುತ್ತಿದ್ದ. ಅದರಿಂದ ಅವನಿಗೆ, ಶ್ರೀರಾಮ ಇದ್ದರೆ ಹೇಗೆ ರಾಜ್ಯವಾಳುತ್ತಿದ್ದನೋ ಹಾಗೆ ರಾಜ್ಯವಾಳುವ ಬುದ್ಧಿ ಬಂತು.

ಮಕ್ಕಳೆಲ್ಲ ಭರತನ ಹಾಗೆ ಆಗಬೇಕು. ಗಾಂಧೀಜೀಯವರ ಪ್ರತಿನಿಧಿಯಾಗಿ ಅವರ ಜೀವನ ಚರಿತ್ರೆಯಿದೆ, ಅವರ ಸಕಲಸಾಹಿತ್ಯವಿದೆ. ಮಕ್ಕಳು ಅದನ್ನು ಧ್ಯಾನಮಾಡಬೇಕು, ಅದನ್ನು ಪೂಜೆಮಾಡಬೇಕು. ಆಗ, ಭರತನ ಆಳಿಕೆಯಲ್ಲಿ ಅಯೋಧ್ಯೆ ಸುಖ ಪಡೆದಂತೆ, ಲೋಕವೆಲ್ಲಾ ಸುಖಪಡುತ್ತದೆ.

ಗಾಂಧೀಜೀಯವರ ಹತ್ತಿರ ಪ್ರವೇಶಿಸಬೇಕೆನ್ನುವವರಿಗೆ ಈ ಏಳು ಪುಸ್ತಕ ಸಹಾಯವಾದೀತೆಂದು ನಂಬಿಕೆ. ಇವು ಈ **'ಗಾಂಧೀ ಜಯಂತಿ'**ಯ ನೆನಪಿಗಾಗಿ ಪ್ರಕಟವಾದವು.

೧. ಮಕ್ಕಳ ಮೋ. ಕ. ಗಾಂಧೀ (೨-೧೦-೪೨)

೨. ಗಿಳಿಮರಿಗಳ ಗಾಂಧೀ (೩-೧೦-೪೨)

೩. ಕಸ್ತೂರೀ ತಿಲಕಂ (೪-೧೦-೪೨)

೪. ಮಾ ಕ್ಲೈಬ್ಯಂ (೫-೧೦-೪೨)

೫. ಶ್ರೀ ಭಗವಾನುವಾಚ (೬-೧೦-೪೨)

೬. ದರ್ಶನ ದಾನ (೭-೧೦-೪೨)

೭. ಗಾಂಧೀ ವಿದ್ಯೆ (೮-೧೦-೪೨)

ಮಹಾಮಂಗಳಾರತಿಯ ದಿವಸ ಪ್ರಕಟವಾಗುತ್ತದೆ:

"ಸಂಭವಾಮಿ ಯುಗೇ ಯುಗೇ"

(೯-೧೦-೪೨)